ದುರ್ಗಂಧ ಬರುತ್ತಿಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡಳು. ಆಮೇಲೆ ಸೂಟುಕೇಸು ತೆರೆದು, ಮದುವೆಯ ಕಾಲದಲ್ಲಿ ಅವನು ತನಗೆ ತೆಗೆಸಿಕೊಟ್ಟಿದ್ದ ಸೀರೆ ಉಟ್ಟು, ಕುಪ್ಪಸ ತೊಟ್ಟು, ಬುರುಖಾ ಹಾಕಿಕೊಂಡಳು. ಮೂರು ದಿನಗಳಿಂದ ಹೊಟ್ಟೆಗೇನೂ ಇಲ್ಲದೆ ನಡುಗುವ ಕೈಕಾಲುಗಳನ್ನು ಹೇಗೋ ನಿಯಂತ್ರಿಸಿಕೊಂಡು ಒಳಕೋಣೆಗೆ ಹೋಗಿ ಕಾಣಿಕೆ ಡಬ್ಬವನ್ನು ಒಡೆದು ನೋಡಿದಳು. ನೂರ ಹದಿಮೂರು ರೂಪಾಯಿಗಳಿದ್ದವು. ಇನ್ನು ಆಸ್ಪತ್ರೆಗೆ ನಡೆಯುವ ಸಂಕಷ್ಟವಿಲ್ಲವೆಂದು ರಿಕ್ಷಾ ಹತ್ತಿದಳು.

ಆಸ್ಪತ್ರೆಯಲ್ಲಿದ್ದ ಅಧಿಕಾರಿ ನಿನ್ನ ಗಂಡ ಕೊರೊನಾದಿಂದ ತೀರಿ ಹೋದ. ಹೆಣವನ್ನು ನಾವೇ ವಿಲೇವಾರಿ ಮಾಡಬೇಕಾಗುತ್ತದೆ. ನಿನಗೆ ಕೊಡುವ ಹಾಗಿಲ್ಲ. ನಿನಗೆ ಮುಖ ನೋಡಬೇಕೆಂದರೆ ಐದು ಸಾವಿರ ಕೊಡು ಎಂದು ಜಬರದಸ್ತಿನಿಂದ ಹೇಳಿದಾಗ ಅವಳು ಕೈಯಲ್ಲಿರುವ ಹಣವನ್ನು ಎಣಿಸಿ ನೋಡಿದಳು. ಆಟೊಗೆ ಐವತ್ತೈದು ಕೊಟ್ಟು ಐವತ್ತೆಂಟು ಉಳಿದಿತ್ತು! ಏನು ನೋಡುತ್ತಿರುವೆ. ಹಣವಿಲ್ಲದಿದ್ದರೆ ಇಲ್ಲಿ ನಿಲ್ಲಬೇಡ. ಕೊರೊನಾ ನಿನಗೂ ಅಂಟಿಕೊಳ್ಳುತ್ತದೆ ಎಂದಾಗ ಬುರ್ಖಾದಿಂದಲೇ ಕಣ್ಣೀರು ಉಜ್ಜಿಕೊಂಡು ನೇರ ಮಸೀದಿಗೆ ರಿಕ್ಷಾ ಹತ್ತಿದಳು. ಮತ ಪಂಡಿತ ವಿಷಯ ತಿಳಿದು ಒಂದು ಸಂಖ್ಯೆಗೆ ಫೋನು ಮಾಡಿದಾಗ ಏನಾಶ್ಚರ್ಯ? ಸಾಕ್ಷಾತ್ ಎಂಎಲ್ಎನೇ ಬಂದು ಬಿಟ್ಟ. ನೀನು ಇಲ್ಲಿರಮ್ಮ ನಾನು ಹೋಗಿ ಹೆಣವನ್ನು ತರುತ್ತೇನೆ. ನಮ್ಮದೇ ಖಬರ್‌ಸ್ಥಾನ್ ಇರುವಾಗ ನಮ್ಮವರ ಶವವನ್ನು ಹಾಗೆ ಬೇವಾರಿಸ್ ಎಲ್ಲೆಲ್ಲಾ ಹೂಳಬಾರದು ಎಂದ.

